# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ರವರ ಕಛೇರಿ,
ಕಾರ್ಯನಿರ್ವಾಹಕ ಇಂಜಿನಿಯರರು(ವಿ),
ಕಾರ್ಯ ಮತ್ತು ಪಾಲನೆ, ವಿಭಾಗ,
ಗು.ವಿ.ಸ.ಕಂ.ನಿ., ಸೇಡಂ.

Email: eesedamdvn@gmail.com
Email: aosdm.gescom@gmail.com
Phone No:08441276470

ಸಂಖ್ಯೆ:ಕಾನಿಅ(ವಿ)ಸೇಡಂ/ಲೆ/ಸಲೆಅ/ಹಿಸ-1/2021-22/ -5169-5174 ದಿನಾಂಕ: 15-12-2021

## -:ಗ್ರಾಹಕರ ಸಂವಾದ ಸಭೆಯ ನಡುವಳಿಗಳು:-

ದಿನಾಂಕ: 15-12-2021 ರಂದು ಗ್ರಾಹಕರ ಕುಂದುಕೋರತೆ ಹಾಗೂ ವಿದ್ಯುತ್ ಸುರಕ್ಷತಾ ಸಭೆಯನ್ನು ಕಾರ್ಯ ಮತ್ತು ಪಾಲನೆ, ಉಪ-ವಿಭಾಗಿಯ ಕಛೇರಿ. ಗು.ವಿ.ಸ.ಕಂ.ನಿ, ಸೇಡಂ ಆವರಣದಲ್ಲಿ ಮಾನ್ಯ ಶ್ರೀ. ಖಂಡಪ್ಪ ಸೋನವಣೆ, ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ, ವಿಭಾಗ ಗು.ವಿ.ಸ.ಕಂ.ನಿ, ಸೇಡಂ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮತ್ತು ಶ್ರೀ. ಮಹ್ಮದ್ ಬಾಬ್ರುದ್ದೀನ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ, ಉಪ-ವಿಭಾಗ, ಗು.ವಿ.ಸ.ಕಂ.ನಿ, ಸೇಡಂ ರವರು ಈ ಸಭೆಗೆ ಶುಭ ಕೋರುವ ಮುಖಾಂತರ ಈ ಸಭೆಯನ್ನು ಆರಂಭಿಸಲಾಯಿತು.

### ಈ ಸಭೆಗೆ ಕೆಳಕಂಡ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು ಹಾಜರಾಗಿದ್ದುರು.

| | |
|---|---|
| 1) ಶ್ರೀ. ಲಕ್ಷ್ಮಪ್ಪ ಕಾಶಪ್ಪ | ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ, ಉಪ-ವಿಭಾಗ, ಗು.ವಿ.ಸ.ಕಂ.ನಿ, ಸೇಡಂ. |
| 2) ಶ್ರೀ. ಮುರಲಿಧರ | ಕಿರಿಯ ಇಂಜಿನಿಯರರು(ವಿ), ತಾಂತ್ರಿಕ ಶಾಖೆ, ಕಾರ್ಯ ಮತ್ತು ಪಾಲನೆ, ಗು.ವಿ.ಸ.ಕಂ.ನಿ, ಸೇಡಂ. |
| 3) ಶ್ರೀ. ಬಲವಂತ | ಸಹಾಯಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ, ಶಾಖೆ, ಗು.ವಿ.ಸ.ಕಂ.ನಿ, ಮುಧೋಳ. |
| 4) ಶ್ರೀ. ತಿಪ್ಪಣ್ಣ | ಪ್ರಭಾರಿ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ, ಶಾಖೆ, ಗು.ವಿ.ಸ.ಕಂ.ನಿ, ಕೋಡ್ಲಾ. |
| 5) ಶ್ರೀ. ಎಮ್.ಡಿ ಉಸ್ಮಾನ | ಪ್ರಭಾರಿ ಶಾಖಾಧಿಕಾರಿ 24*7, ಕಾರ್ಯ ಮತ್ತು ಪಾಲನೆ, ನಗರ ಶಾಖೆ, ಗು.ವಿ.ಸ.ಕಂ.ನಿ, ಸೇಡಂ. |
| 6) ಶ್ರೀ. ಶಂಕರ | ಪ್ರಭಾರಿ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ, ಶಾಖೆ, ಗು.ವಿ.ಸ.ಕಂ.ನಿ. ಮಳಖೇಡ. |
| 7) ಶ್ರೀ. ಶರಣಪ್ಪ | ಪ್ರಭಾರಿ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ, ಶಾಖೆ, ಗು.ವಿ.ಸ.ಕಂ.ನಿ. ಕುರಕುಂಟಾ. |

### ಸಭೆಯಲ್ಲಿ ಚರ್ಚಿಸಿದ ವಿಷಯಗಳು

ಈ ಸಭೆಯಲ್ಲಿ ಶ್ರೀ. ಲಕ್ಷ್ಮೆಪ್ಪ ಸಹಾಯಕ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನೆ, ಉಪ-ವಿಭಾಗ ಗು.ವಿ.ಸ.ಕಂ.ನಿ, ಸೇಡಂ ವ್ಯಾಪ್ತಿಗೆ ಬರುವ ಎಲ್ಲಾ ವಿದ್ಯುತ್ ಗ್ರಾಹಕರನ್ನು ಹಾಗೂ ಅಧಿಕಾರಿಗಳು, ಸಿಬ್ಬಂಧಿ ವರ್ಗದವರನ್ನು ಸ್ವಾಗತ ಕೋರಿದರು. ಗ್ರಾಹಕರ ಸಂವಾದ ಸಭೆಯ ಮತ್ತು ವಿದ್ಯುತ್ ಸುರಕ್ಷತಾ ಸಭೆಗೆ ಅಧ್ಯಕ್ಷತೆಯನ್ನು ವಹಿಸಿದ ಶ್ರೀ. ಮಾನ್ಯ ಶ್ರೀ. ಖಂಡಪ್ಪ ಸೋನವಣೆ, ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ, ವಿಭಾಗ ಗು.ವಿ.ಸ.ಕಂ.ನಿ, ಸೇಡಂ ರವರನ್ನು ಸ್ವಾಗತಿಸಿದರು.

ಮುಂದುವರೆದು ಕೆ.ಇ.ಆರ್.ಸಿ. ನಿಯಮಾವಳಿಗಳ ಪ್ರಕಾರ ಗ್ರಾಹಕರ ಸಂವಾಧ ಸಭೆಯನ್ನು ಏರ್ಪಡಿಸಿದ್ದು, ತಾವು ತಮ್ಮ ಕುಂದುಕೋರತೆಗಳನ್ನು ವ್ಯಕ್ತಪಡಿಸಲು ಮತ್ತು ಮುಕ್ತವಾಗಿ ಚರ್ಚಿಸಲು ಅವಕಾಶವಿರುತ್ತದೆಂದು ತಿಳಿಸುತ್ತ, ಮುಂದಿನ ಸಭೆಗೆ ಸಂಬಂಧಿಸಿದ ವಿಷಯಗಳನ್ನು ಮುಕ್ತವಾಗಿ ಚರ್ಚಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ರವರಿಗೆ ಮನವಿ ಮಾಡಿಕೊಂಡರು.

1. ಶ್ರೀ. ವಿಜಯಕುಮಾರ ಸರಕಾರಿ ಆಸ್ಪತ್ರೆ ಹತ್ತಿರ ಸೇಡಂ ರವರು ಪ್ರತಿ ತಿಂಗಳ ಬಿಲ್‌ನ ದಿನಾಂಕದೊಳಗಾಗಿ ವಿತರಿಸುತ್ತಿಲ್ಲ ಎಂದು ದೂರು ನೀಡಿರುತ್ತಾರೆ.
   ಸದರಿ ಮನವಿಗೆ ಸ್ಪಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ನಗರ ಶಾಖಾಧಿಕಾರಿಗಳಿಗೆ ಸದರಿ ದೂರನ್ನು ಪರಿಶೀಲಿಸಿ, ಸಂಬಂಧಪಟ್ಟ ಬಡಾವಣೆಯ ಮಾಪಕ ಓದುಗನಿಗೆ ಪ್ರತಿ ತಿಂಗಳ ದಿನಾಂಕದೊಳಗಾಗಿ ವಿದ್ಯುತ್ ಗ್ರಾಕಹರಿಗೆ ಬಿಲ್‌ನ್ನು ವಿತರಿಸಲು ಸೂಚಿಸಿದರು.

Scanned with CamScanner

2. ಶ್ರೀ. ಮಲ್ಲಿಕಾರ್ಜುನ ಸರಕಾರಿ ಆಸ್ಪತ್ರೆ ಹತ್ತಿರ ಸೇಡಂ ರವರು ತಮ್ಮ ಬಿಲ್‌ನಲ್ಲಿ ಮೊತ್ತ ಹೆಚ್ಚಾಗಿ ಬಂದಿರುತ್ತದೆ ಎಂದು ದೂರು ನೀಡಿರುತ್ತಾರೆ.

   ಸದರಿ ದೂರಿಗೆ ಸ್ಪಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಸಹಾಯಕ ಲೆಕ್ಕಾಧಿಕಾರಿಗಳಿಗೆ ಸದರಿ ದೂರನ್ನು ಪರಿಶೀಲಿಸಿ, ಗ್ರಾಹಕರಿಗೆ ಸ್ಥಳದಲ್ಲೆ ಪರಿಶೀಲಿಸಿ ಅವರ ಸಮಸ್ಯೆಯನ್ನು ಬಗೆಹರಿಸಲಾಯಿತು.

3. ಶ್ರೀ. ಮಹಾಂತೇಶ ಬಸವ ನಗರ ಸೇಡಂ ರವರ ವಿದ್ಯುತ್ ಸ್ಥಾವರ ಸಂಖ್ಯೆ: ಎಸ್-8016398817ರ ತಮ್ಮ ಬಿಲ್‌ನಲ್ಲಿ ಮೊತ್ತ ಹೆಚ್ಚಾಗಿ ಬಂದಿರುತ್ತದೆ ಎಂದು ದೂರು ನೀಡಿರುತ್ತಾರೆ.

   ಸದರಿ ದೂರಿಗೆ ಸ್ಪಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಸಹಾಯಕ ಲೆಕ್ಕಾಧಿಕಾರಿಗಳಿಗೆ ಸದರಿ ದೂರನ್ನು ಪರಿಶೀಲಿಸಿ, ಗ್ರಾಹಕರಿಗೆ ಸ್ಥಳದಲ್ಲೆ ಪರಿಶೀಲಿಸಿ ಅವರ ಸಮಸ್ಯೆಯನ್ನು ಬಗೆಹರಿಸಲಾಯಿತು.

4. ಶ್ರೀ. ಬಸ್ಸಮ್ಮ ಗಂಡ ಮರೆಯಪ್ಪ, ಆಶ್ರಯ ಕಾಲೋನಿ, ಸೇಡಂ ರವರು ವಿದ್ಯುತ್ ಸರಬರಾಜುನಲ್ಲಿ ತುಂಬ ಅಡಚಣೆಯಾಗುತ್ತಿದೆ ಎಂದು ದೂರು ನೀಡಿರುತ್ತಾರೆ.

   ಸದರಿ ಮನವಿಗೆ ಸ್ಪಂದಿಸಿ ಸಹಾಯಕ ಕಾರ್ಯನಿವಾಹಕ ಇಂಜಿನಿಯರರು(ವಿ), ಸೇಡಂ ರವರು 11 ಕೆ.ವಿ ವಿದ್ಯುತ್ ಮಾರ್ಗಗಳ ನಿರ್ವಾಹಣೆ, ಎಲ್.ಟಿ ಮಾರ್ಗಗಳ ನಿರ್ವಾಹಣೆ ಹಂತ-ಹಂತವಾಗಿ ನ್ಯೂನತೆಯನ್ನು ಸರಿಪಡಿಸುವುದಾಗಿ ತಿಳಿಸಿದರು.

5. ಶ್ರೀ. ವಿಶ್ವನಾಥ ಮೇನ ರೋಡ ಸೇಡಂ ರವರ ಸ್ಥಾವರ ಸಂಖ್ಯೆ ಎಸ್-2801ಗೆ ಬಿಲ್ ಹೆಚ್ಚಾಗಿ ಬರುತ್ತಿದೆ ಎಂದು ದೂರು ನೀಡಿರುತ್ತಾರೆ.

   ಸದರಿ ಮನವಿಗೆ ಸ್ಪಂದಿಸಿ ಸಹಾಯಕ ಕಾರ್ಯನಿವಾಹಕ ಇಂಜಿನಿಯರರು(ವಿ), ಸೇಡಂ ರವರು ಸಹಾಯಕ ಲೆಕ್ಕಾಧಿಕಾರಿರವರಿಗೆ ಸೂಚಿಸಿದಾಗ ಗ್ರಾಹಕರಿಗೆ ಮಾಪಕ ತಪಾಸಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ನಂತರ ಗ್ರಾಹಕರು ಅದಕ್ಕೆ ಸ್ಪಂಧಿಸಿ ತಪಾಸಣೆಯನ್ನು ಮಾಡಲು ಒಪ್ಪಿಕೊಂಡಿದರು.

6. ಶ್ರೀ. ಹಶೆನಪ್ಪ ತಂದೆ ಯಲ್ಲಪ್ಪ, ಸಾ॥ ತರನಳ್ಳಿ ರವರಿಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ನೀರಾವರಿ ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮಾರ್ಗ ಮತ್ತು ಕಂಬಗಳ ಕೆಲಸ ಮಾಡಿದ್ದು, ವಿದ್ಯುತ್ ಸಂಪರ್ಕ ಮಾಡಿರುವುದಿಲ್ಲ ಎಂದು ಲಿಖೀತ ದೂರನ್ನು ಸಲ್ಲಿಸಿದರು.

   ಸದರಿ ದೂರಿಗೆ ಸ್ಪಂಧಿಸಿದ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ವಿಭಾಗ ಸೇಡಂ ರವರು ಮಳಖೇಡ ಶಾಖಾಧಿಕಾರಿಗಳಿಗೆ ಕೂಡಲೇ ಸದರಿ ಸ್ಥಾವರಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿರುವ ವರದಿಯನ್ನು ನೀಡಲು ಸೂಚಿಸಿದರು.

7. ಶ್ರೀ. ಅಣವೀರ ತಂದೆ ಈರಣ್ಣ ಬಟಗೇರಾ(ಬಿ) ರವರು ತಮ್ಮ ಪ್ಲಾಟ್‌ನಲ್ಲಿ ಬಂದಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಲಿಖೀತ ದೂರನ್ನು ಸಲ್ಲಿಸಿದರು.

   ಸದರಿ ದೂರಿಗೆ ಸ್ಪಂಧಿಸಿದ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಸೇಡಂ ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಸೇಡಂ ಮತ್ತು ಶಾಖಾಧಿಕಾರಿ ಕುರಕುಂಟಾ ರವರಿಗೆ ಸಂಬಂಧಪಟ್ಟ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ಅದಕ್ಕೆ ಅಂದಾಜು ಪಟ್ಟಿ ತಯಾರಿಸಿ ಗ್ರಾಹಕರಿಂದ ಮೊತ್ತವನ್ನು ಭರಿಸಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸೂಚಿಸಿದರು.

   ಅಂತಿಮವಾಗಿ ಶ್ರೀ. ಲಕ್ಷ್ಮಪ್ಪ ಕಾಶಪ್ಪ, ಸಹಾಯಕ ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ, ಉಪ-ವಿಭಾಗ, ಗು.ವಿ.ಸ.ಕಂ.ನಿ, ಸೇಡಂ ರವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗ್ರಾಹಕರು ಮತ್ತು ಅಧಿಕಾರಿಗಳು, ಸಿಬ್ಬಂಧಿ ವರ್ಗದವರಿಗೆ ಧನ್ಯವಾದಗಳನ್ನು ಸಮರ್ಪಿಸಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯನಿರ್ವಾಹಕ ಇಂಜಿನಿಯರರು(ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಗು.ವಿ.ಸ.ಕಂ.ನಿ., ಸೇಡಂ.

ಪ್ರತಿಗಳನ್ನು ದಯಾಪರರ ಮಾಹಿತಿಗಾಗಿ.

1. ಮಾನ್ಯ ಮುಖ್ಯ ಇಂಜಿನಿಯರರು(ವಿ), ನಿಗಮ ಯೋಜನೆ ಗು.ವಿ.ಸ.ಕಂ.ನಿ, ಕಲಬುರಗಿ.
2. ಮಾನ್ಯ ಮುಖ್ಯ ಇಂಜಿನಿಯರರು(ವಿ), ವಲಯ ಕಛೇರಿ ಗು.ವಿ.ಸ.ಕಂ.ನಿ, ಕಲಬುರಗಿ.
3. ಮಾನ್ಯ ಅಧೀಕ್ಷಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗು.ವಿ.ಸ.ಕಂ.ನಿ, ಕಲಬುರಗಿ.

ಪ್ರತಿಗಳು:-

1) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕಾರ್ಯ ಮತ್ತು ಪಾಲನೆ, ಉಪ-ವಿಭಾಗ, ಗು.ವಿ.ಸ.ಕಂ.ನಿ, ಸೇಡಂ.
2) ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಶಾಖೆ, ಸೇಡಂ /ಮುಧೋಳ /ಕೋಡ್ಲಾ /ಕುರಕುಂಟಾ/ಮೋತಕಪಲ್ಲಿ/ಮಳಖೇಡ.

Scanned with CamScanner